ಗಂಭೀರ ಕಾಯಿಲೆ ಹಾಗೂ ಅಪಘಾತಗಳಿಂದ ಪ್ರತಿಶತ 1/3 ಭಾಗ ಜನಸಂಖ್ಯೆಯು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿವೆ. ಅದೇ ರೀತಿ, ಮಾನಸಿಕ ಹಾಗೂ ದೈಹಿಕವಾಗಿಯೂ ಜರ್ಜರಿತರಾಗುತ್ತಿದ್ದಾರೆ. ಇದರಿಂದಾಗಿಯೇ ಕೆಲವರು ವೈದ್ಯಕೀಯ ಸೇವೆಗಳನ್ನು ಪಡೆಯಲು ಹಿಂದೇಟು ಹಾಕುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಹಲವು ದೇಶಗಳು ಈಗಾಗಲೇ ಸಾರ್ವತ್ರಿಕ ಆರೋಗ್ಯ ಯೋಜನೆಗಳನ್ನು ರೂಪಿಸಿ, ಜಾರಿಗೊಳಿಸಿವೆ. ಇದರ ಫಲಿತಾಂಶಗಳು ಉತ್ತಮವಾಗಿ ಬಂದಿವೆ. ಹೀಗಾಗಿ ಯೋಜನಾ ಆಯೋಗವು ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ರಚಿಸಿ, ನಮ್ಮ ದೇಶದಲ್ಲಿಯೂ ಸಾರ್ವತ್ರಿಕ ಆರೋಗ್ಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಶಿಫಾರಸ್ಸು ಮಾಡಿದೆ.

ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ನಮ್ಮ ರಾಜ್ಯ ಒಂದು ಹೆಜ್ಜೆಯನ್ನು ಮುಂದೆ ಇಟ್ಟಿದೆ. 2013ರಲ್ಲಿಯೇ ಅಂದಿನ ಮುಖ್ಯ ಮಂತ್ರಿಗಳು ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷರು ಈ ಬಗ್ಗೆ ಸಭೆ ನಡೆಸಿ, ಕಾರ್ಯಕ್ರಮನ್ನು ಅನುಷ್ಠಾನ ಮಾಡಿದ್ದರು. ಪ್ರಾರಂಭಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಪಬ್ಲಿಕ್ ಹೆಲ್ತ್ ಫೌಂಡೇಶನ್ ಇಂಡಿಯಾ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್ ಬೆಂಗಳೂರು ಸಂಸ್ಥೆಯನ್ನು ತಾಂತ್ರಿಕ ಸಲಹೆಗಾರರನ್ನಾಗಿ ನೇಮಿಸಿಕೊಳ್ಳಲಾಗಿದೆ. ಈ ಯೋಜನೆಯನ್ನು ಎರಡು ಪ್ರಮುಖ ವಿಭಾಗಗಳಲ್ಲಿ ವಿಂಗಡಿಸಲಾಗಿದೆ. 1.ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳು 2. ದ್ವಿತಿಯ ಹಂತದ ರೋಗ /ತೀವ್ರ ತರಹದ ಗಂಭೀರ ಗಾಯಗಳ ಚಿಕಿತ್ಸೆಗೆ ವಿಮಾ ಯೋಜನೆ.

## ಕಾರ್ಯಕ್ರಮದ ಉದ್ದೇಶಗಳು

1. ರೋಗ ನಿರೋಧಕ ಆರೋಗ್ಯಕರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸುವುದು
2. ಪ್ರಸ್ತುತ ಲಭ್ಯವಿರುವ ಆರೋಗ್ಯ ಸೇವೆಗಳ ಗುಣಮಟ್ಟವನ್ನು ಸುಧಾರಿಸಿ, ಚಿಕಿತ್ಸಾ ವೆಚ್ಚವನ್ನು ಕಡಿಮೆಮಾಡುವುದು
3. ವೈದ್ಯಕೀಯ ಸೇವೆಗಳ ವ್ಯಾಪ್ತಿಯನ್ನು ವಿಸ್ತರಿಸಿ, ಸ್ಥಳೀಯವಾಗಿ ಸೇವೆಗಳು ಲಭ್ಯವಾಗುವಂತೆ ಅವಕಾಶ ಕಲ್ಪಿಸುವುದು
4. ಸಮುದಾಯ ಆರೋಗ್ಯ ಸೇವೆಗಳನ್ನು ಅರಿತು ಹೆಚ್ಚು ಉಪಯೋಗ ಪಡೆಯಲು ಕ್ರಮವಹಿಸುವುದು
5. ಅವಶ್ಯಕ ಸಮುದಾಯಕ್ಕೆ ಶೀಘ್ರ ರೋಗ ಪತ್ತೆ ಹಾಗೂ ರೆಫರಲ್ ಸೇವೆಗಳನ್ನು ನೀಡುವುದು (ಇದರಿಂದ 2 ನೇ ಹಾಗೂ 3 ನೇ ದರ್ಜೆಯ ಗಂಭೀರ ಸಮಸ್ಯೆಗಳನ್ನು ತಡೆಗಟ್ಟಬಹುದು)
6. ಸಣ್ಣ ಪುಟ್ಟ ಕಾಯಿಲೆಗಳಿಗೆ ಚಿಕಿತ್ಸೆ ಹಾಗೂ ಅನುಸರಣಾ ಸೇವೆಗಳನ್ನು ನೀಡುವುದು
7. ಉಪ ಕೇಂದ್ರಮಟ್ಟದಲ್ಲಿ ರೋಗ ಪತ್ತೆ, ಉಚಿತ ಔಷಧಿ ವಿತರಣೆ, ನೇರ ನಿಗಾವಣೆಗೆ ಕ್ರಮವಹಿಸಲಾಗುವುದು
8. ಸಾಂಕ್ರಾಮಿಕ ಹಾಗೂ ಸಾಂಕ್ರಾಮಿಕವಲ್ಲದ ರೋಗಗಳ ನಿರ್ವಹಣೆ.

### ಆರೋಗ್ಯ ಕೇಂದ್ರಗಳು ಮೇಲ್ದರ್ಜೆಗೆ

ಸಾರ್ವತ್ರಿಕ ಆರೋಗ್ಯ ಯೋಜನೆಯನ್ನು ಪ್ರಾಯೋಗಿಕವಾಗಿ ರಾಯಚೂರಿನ ಲಿಂಗಸಗೂರು ಹಾಗೂ ಮೈಸೂರಿನ ಟಿ. ನರಸೀಪುರ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಯಿತು. ಕಾರ್ಯಕ್ರಮ ಅನುಷ್ಠಾನದ ವಾಸ್ತವ ಸ್ಥಿತಿಗತಿಗಳನ್ನು ಅರಿತುಕೊಳ್ಳಲು ನಿಗದಿತ ತಾಂತ್ರಿಕ ಸಲಹಾ ಸಂಸ್ಥೆಯಿಂದ (ಪಿ.ಎಚ್.ಎಫ್.ಐ., ಐ.ಐ.ಪಿ.ಎಚ್) ಎರಡು ಅಧ್ಯಯನಗಳನ್ನೂ ನಡೆಸಿ, ಇಲಾಖೆ ವರದಿ ಪಡೆದುಕೊಂಡಿದೆ. ಯೋಜನೆಯ ಉದ್ದೇಶವನ್ನು ಈಡೇರಿಸಲು ಆರೋಗ್ಯ ಉಪಕೇಂದ್ರಗಳನ್ನು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಿ, ವಿಶೇಷ ತರಬೇತಿ ಪಡೆದ ಶುಶ್ರೂಷಕರ ನೆರವಿನಿಂದ ಪ್ರಸ್ತುತ ಕಾರ್ಯಕ್ರಮಗಳ ಜೊತೆಗೆ ಹೆಚ್ಚುವರಿಯಾಗಿ 12 ಸೇವೆಗಳನ್ನು (ಸಂತಾನೋತ್ಪತ್ತಿ ಕಾರ್ಯಕ್ರಮದಿಂದ ಒಳಗೊಂಡು ಹಿರಿಯ ನಾಗರೀಕರ ಸೇವೆಗಳವರೆಗೆ) ಪ್ರಾಯೋಗಿಕವಾಗಿ ರಾಯಚೂರಿನ ಲಿಂಗಸಗೂರು ಹಾಗೂ ಮೈಸೂರಿನ ಟಿ.ನರಸೀಪುರ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

ಮಾರ್ಚ್ 2018 ರಿಂದ ಒಟ್ಟು 571 ಕೇಂದ್ರಗಳಲ್ಲಿ ಈ ಸೇವೆಗಳನ್ನು ಪ್ರಾಯೋಗಿಕವಾಗಿ ಒದಗಿಸಲಾಗುತ್ತಿದೆ. ರಾಜ್ಯದಲ್ಲಿರುವ ಎಲ್ಲ ಆರೋಗ್ಯ ಉಪಕೇಂದ್ರಗಳನ್ನು ಹಂತ ಹಂತವಾಗಿ 5 ವರ್ಷಗಳಲ್ಲಿ ಮೇಲ್ದರ್ಜೆಗೇರಿಸಲು ಸರ್ಕಾರ ನಿರ್ಧರಿಸಿದ್ದು, 2018–19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಈ ಬಗ್ಗೆ ಅಧಿಕೃತವಾಗಿ ಘೋಷಿಸಲಾಗಿದೆ. ಅದರಂತೆ, 2018–19ನೇ ಸಾಲಿನಲ್ಲಿ ರಾಯಚೂರು, ಯಾದಗಿರಿ, ಚಿಕ್ಕಮಗಳೂರು, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ 15 ತಾಲ್ಲೂಕುಗಳಿಂದ 505 ಆರೋಗ್ಯ ಉಪಕೇಂದ್ರಗಳಲ್ಲಿ 132 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 71 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಆರೋಗ್ಯ ಕ್ಷೇಮ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಆಗಸ್ಟ್ 2019 ರಿಂದ ಈವರೆಗೆ ದ್ವಿತೀಯ ಹಂತದಲ್ಲಿ ಒಟ್ಟು 708 ಕೇಂದ್ರಗಳಲ್ಲಿ ಈ ಎಲ್ಲ ಸೇವೆಗಳನ್ನು ಒದಗಿಸಲಾಗುತ್ತಿದೆ.



ಪ್ರಸಕ್ತ ಸಾಲಿನಲ್ಲಿ 6 ಜಿಲ್ಲೆಗಳ 23 ತಾಲ್ಲೂಕುಗಳಲ್ಲಿನ 766 ಆರೋಗ್ಯ ಉಪಕೇಂದ್ರಗಳನ್ನು, 402 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಾಗೂ 293 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಆರೋಗ್ಯ ಕ್ಷೇಮ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಫೆಬ್ರುವರಿ 2020 ರಿಂದ ಒಟ್ಟು 1461 ಕೇಂದ್ರಗಳಲ್ಲಿ ಸೇವೆಗಳು ದೊರೆಯುತ್ತಿವೆ. ಪ್ರಸಕ್ತ ಸಾಲಿನಲ್ಲಿ 7 ಜಿಲ್ಲೆಗಳ 1497 ಆರೋಗ್ಯ ಉಪಕೇಂದ್ರಗಳನ್ನು, ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಆರೋಗ್ಯ ಕ್ಷೇಮ ಕೇಂದ್ರಗಳನ್ನಾಗಿ

